Date : 26.11.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಸಿ.ಎನ್. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿಯ ದೃಢೀಕೃತ ಪ್ರತಿ, ದಿಃ 30.07.2017 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಗೋಣೂರು ಗ್ರಾಮದ ಸರ್ವೆ ನಂಬರ್ 203 ಆಸ್ತಿಯನ್ನು ಭೂಪರಿವರ್ತನೆ ಮಾಡಲು ಹೊರಡಿಸಿದ ಆದೇಶದ ನಕಲು ದೃಢೀಕೃತ ಪ್ರತಿ, ಅದೇ ರೀತಿ ಚಿತ್ರದುರ್ಗ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ದಿಃ 31.12.2016 ರಂದು ಹೊರಡಿಸಿದ ಆದೇಶದ ದೃಢೀಕೃತ ಪ್ರತಿ ನಕ್ಷೆಯೊಂದಿಗೆ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 3 ಎಂದು, ಗೋಣೂರು ಗ್ರಾಮದ ಸರ್ವೆ ನಂ. 3/3 ಆಸ್ತಿಯ ಬಗ್ಗೆ ಇರುವ ಪಹಣಿ ಪ್ರತಿಯ ನಕಲು ದೃಢೀಕೃತ ಪ್ರತಿ ಮತ್ತು ಸದರಿ ಭೂಮಿಯನ್ನು ಭೂಪರಿವರ್ತನೆ ಮಾಡಲು ಅವಕಾಶ ನೀಡಿ ದಿಃ 13.11.2023 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶದ ನಕಲು ದೃಢೀಕೃತ ಪ್ರತಿ ಹಾಗೂ ಅದೇ ಸರ್ವೆ ನಂಬರ್ ಆಸ್ತಿಯ ಬಗ್ಗೆ ಚಿತ್ರದುರ್ಗ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ದಿಃ 17.01.2024 ರಂದು ಹೊರಡಿಸಿದ ಆದೇಶದ ದೃಢೀಕೃತ ಪ್ರತಿ ನಕ್ಷೆಯೊಂದಿಗೆ ಹಾಜರುಪಡಿಸಿದ್ದು, ಅವುಗಳನ್ನು ನಿಪಿ–4 ರಿಂದ 6 ಎಂದು, ಗೋಣೂರು ಗ್ರಾಮದ ಸರ್ವೆ ನಂ. 149/2 ಆಸ್ತಿಯ ಬಗ್ಗೆ ಇರುವ ಪಹಣಿ ಪ್ರತಿಯ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–7 ಎಂದು, ಅದೇ ಸರ್ವೆ ನಂಬರ್ ಆಸ್ತಿಯ ಬಗ್ಗೆ ಆದ ಒಂದು ನೊಂದಣಿ ಕ್ರಯಪತ್ರದ ನಕಲು ದೃಢೀಕೃತ ಪ್ರತಿ ಮತ್ತು ಗೋಣೂರು ಗ್ರಾಮದ ಇನ್ನೊಂದು ಆಸ್ತಿಯ ಬಗ್ಗೆ ದಿಃ 21.11.2019 ರಂದು ನೊಂದಣಿ ಕ್ರಯಪತ್ರವಾಗಿದ್ದು, ಅದರ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–8 ಮತ್ತು 9 ಎಂದು, ಗೋಣೂರು ಗ್ರಾಮದ ಸರ್ವೆ ನಂ. 3/3 ರಲ್ಲಿ ವಸತಿ ಉದ್ದೇಶಕ್ಕೆಂದು ಸೈಟುಗಳನ್ನು ಮಾಡಿದ್ದು, ಆ ಬಗ್ಗೆ ಇರುವ 5 ಪೋಟೋ ಮತ್ತು 1 ಸಿಡಿ ಹಾಜರುಪಡಿಸಿದ್ದು, ಪೋಟೋಗಳನ್ನು ಒಟ್ಟಾಗಿ ನಿಪಿ–10 ಎಂದು, ಸಿಡಿಯನ್ನು ನಿಪಿ–11 ಎಂದು ಮತ್ತು ಸದರಿ ಪೋಟೋ ಮತ್ತು ಸಿಡಿ ಮಾಡಿಸುವಾಗ ಸಂಬಂಧಿಸಿದ ಕಂಪ್ಯೂಟರ್ ಸೆಂಟರಿಗೆ ಹಣ ಪಾವತಿಸಿದ ಬಗ್ಗೆ ತೋರಿಸಲು ಇರುವ ಒಂದು ರಸೀದಿ ಹಾಜರುಪಡಿಸಿದ್ದು, ಅದನ್ನು ನಿಪಿ–12 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ದ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – 1 ಮತ್ತು 2 ನೇ ಎದುರುದಾರ ಶ್ರೀ ಜಿ.ಎಸ್.ಎ ವಕೀಲರಿಂದ –**

**ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ನ್ಯಾಯಯುತ ದೃಷ್ಟಿಯಿಂದ ಒಂದು ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.